## ಬೆಳಗಾವಿಯ ಅಗ್ರಪೇಠ

ಈ ಚಿತ್ರದಲ್ಲಿರುವುದು ಕಲ್ಲು ಸಕ್ಕರೆಯಂತೆ ಕಾಣುತ್ತದೆ. ಆದರೆ ಇದು ಅಗ್ರಪೇಠ ಎಂಬ ಸಿಹಿ ಪದಾರ್ಥ. ಬೆಳಗಾವಿಯಲ್ಲಿ ಸಿಗುತ್ತದೆ. ತಿನ್ನಲು ಮೃದು ಹಾಗೂ ಸಿಹಿ ಜಾಸ್ತಿ ಇರುತ್ತದೆ. ತಿನ್ನುವಾಗ ಫೇಡಾ ತಿಂದಂತೆ ಅನಿಸುತ್ತದೆ. ಮೂಲತಃ ಇದು ಗುಜರಾತ್‌ನದು. ಬೆಳಗಾವಿಯಲ್ಲಿ ಗುಜರಾತ್‌ನ ಮಾರ್ವಾಡಿ ಜನರು ವಾಸ ಮಾಡುತ್ತಿದ್ದಾರೆ. ಈ ಜನರೇ ಅಗ್ರಪೇಠ ತಯಾರಿಸುವುದು. ಬೆಳಗಾವಿಯಲ್ಲಿ ಅವರ ಕೆಲವು ಸ್ವೀಟ್ ಮಾರ್ಟ್‌ಗಳಿದ್ದು, ಅಲ್ಲಿ ಮಾತ್ರ ಸಿಗುತ್ತದೆ. ಸಕ್ಕರೆ, ಕುಂಬಳಕಾಯಿ ಹಾಗೂ ಹಾಲಿನಿಂದ ಅಗ್ರಪೇಠ ತಯಾರಾಗುತ್ತದೆ. ಬೆಳಗಾವಿಗೆ ಬಂದಾಗ ನೀವು ಕೂಡಾ ಸವಿಯಬಹುದು.

**-ಜಗದೀಶ ಎಂ. ಸಂಗಣ್ಣವರ, ಬೆಳಗಾವಿ**






## ಕಬ್ಬಿಣ ಕಾಯಿಸುವ ಕುಲುಮೆ

ಕತ್ತಿ, ನೇಗಿಲು, ಚಾಕು, ಹಾರೆಗಳನ್ನು ಮಾಡುವ 'ಕುಲುಮೆ'ಗಳನ್ನು ಕಾಣುವುದು ಇತ್ತೀಚೆಗೆ ಅಪರೂಪ. ಸ್ವಲ್ಪ ಶ್ರಮವಾದರೂ ತಮ್ಮ ಬಿಡುವಿನ ವೇಳೆಯನ್ನು ವ್ಯರ್ಥ ಮಾಡದೆ, ವಂಶಪಾರಂಪರ್ಯವಾಗಿ ಬಂದ ಕಸುಬನ್ನೂ ಬಿಡದೆ ಈಗಲೂ ಕೆಲವರು ಮುಂದುವರೆಸಿಕೊಂಡು ಜೀವನ ನಡೆಸುತ್ತಾರೆ. ಕಬ್ಬಿಣವನ್ನು ಕಾಯಿಸಲು ಅವಶ್ಯವಾದ ಅಧಿಕ ಬೆಂಕಿಯನ್ನು ಪಡೆಯಲು ತಿದಿಯನ್ನು ಒತ್ತುವುದನ್ನು ಚಿತ್ರದಲ್ಲಿ ಕಾಣಬಹುದು.

**-ಬಿ.ಎಸ್. ರಾಜಲಕ್ಷ್ಮಿ, ಹಾಸನ**

## ಯಾರೀ ಅತಿಥಿ ರಾಮಭದ್ರ?

ಕಾಸರಗೋಡಿನ ಉಪ್ಪಂಗಳ ಭಸ್ಮಾಜೆ ಗೋಪಾಲಕೃಷ್ಣ ಭಟ್ಟರ ಮನೆಗೆ ದಿನಾ ಸಾಯಂಕಾಲ ಸುಮಾರು 6 ಗಂಟೆಯ ಹೊತ್ತಿಗೆ ಆಮೆಯೊಂದು ಬಂದು ಹೊರಜಗಲಿಯಲ್ಲಿ ಬೆಕ್ಕಿಗೆ ಇರಿಸಿದ ಅನ್ನವನ್ನು ತಿಂದು ಹೋಗುವುದನ್ನು ರೂಢಿ ಮಾಡಿಕೊಂಡಿದೆ. ಒಂದು ವೇಳೆ ತಟ್ಟೆಯಲ್ಲಿ ಅನ್ನವಿಲ್ಲದಿದ್ದಲ್ಲಿ ತನ್ನ ಹಸಿವು ನೀಗಿಸಲು ನೇರ ಅಡುಗೆ ಮನೆಗೇ ಪ್ರವೇಶಿಸುತ್ತದೆ. ನಿಗದಿತ ಸಮಯ ಹಾಗೂ ಅಡುಗೆ ಮನೆ ಗುರುತಿಸುವಿಕೆ ನಿಜಕ್ಕೂ ಆಶ್ಚರ್ಯಕರ.

ಫೋಟೋ ತೆಗೆಯಲು ಹತ್ತಿರ ಹೋದಾಗ ಅಪರಿಚಿತರೆಂದು ಮನಗಂಡು ಒಂದು ಕ್ಷಣ ಅನ್ನ ತಿನ್ನುವುದುನ್ನು ಬಿಟ್ಟು ಹಿಂದೆ ಸರಿದು, ಪುನಃ ನಿಧಾನಗತಿಯಲ್ಲಿ ತಿನ್ನಲಾರಂಭಿಸಿತು. ಭಟ್ಟರ ಮೊಮ್ಮಗ ಈ ವಿಶೇಷ ಅತಿಥಿಗೆ 'ರಾಮಭದ್ರ' ಎಂದು ನಾಮಕರಣ ಮಾಡಿ ಸಖ್ಯ ಬೆಳೆಸಿಕೊಂಡಿದ್ದಾನೆ.

**-ಪಾರ್ವತಿ ಐ. ಭಟ್, ಪುಂಡಿಕೈ**

